I/339922/2022

ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18 ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru-03
Telephone: 080 23367123
Email:apccfpr@gmail.com

ಇ-ಕಡತ ಸಂಖ್ಯೆ: KFD/HOFF/B3(EST)/62/2022-PnR-KFD **E - 927102**

ದಿನಾಂಕ: 17-11-2022.

ಸುತ್ತೋಲೆ

ವಿಷಯ: ಭಾರತ ಸಂವಿಧಾನದ ಅನುಚ್ಛೇದ 371 ಜೆ ರನ್ವಯ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013 ರಡಿಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿ ಪ್ರಾದೇಶಿಕ ಸ್ಥಳೀಯ ವೃಂದಕ್ಕೆ ಸೇರಲು ನಿಗದಿತ ನಮೂನೆಯಲ್ಲಿ ಅಭಿಮತ ಪತ್ರಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್ಎಕ್ಸ್ 2012 ದಿನಾಂಕ: 06.11.2013.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 139 ಭೂದಾಪು 2013 ದಿನಾಂಕ: 21.03.2018.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 139 ಭೂದಾಪು 2013 ದಿನಾಂಕ: 24.12.2018.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 22 ಹೈಕಕೋ 2013 ದಿನಾಂಕ: 24.04.2019.

ಭಾರತ ಸಂವಿಧಾನದ ಅನುಚ್ಛೇದ 371 ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013 ರ ಕಂಡಿಕೆ 3 ಮತ್ತು 13 ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇವೆಯಲ್ಲಿನ ಹುದ್ದೆಗಳಲ್ಲಿ ವೃಂದವಾರು ಹುದ್ದೆಗಳನ್ನು ಕಲ್ಯಾಣ – ಕರ್ನಾಟಕ ಪ್ರದೇಶದ ಮೀಸಲಾತಿ ನಿಯಮಗಳ ಅನುಸಾರ ಗುರುತಿಸಿ ಆದೇಶಿಸಲು ಉಲ್ಲೇಖ (1)ರಲ್ಲಿ ಅಧಿಸೂಚಿಸಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ದಾವಣಗೆರೆ ಜಿಲ್ಲೆಯಿಂದ ಹರಪನಹಳ್ಳಿ ತಾಲ್ಲೂಕನ್ನು ತೆಗೆದು, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾಗಿದ್ದು, ಉಲ್ಲೇಖ (3)ರ ಸರ್ಕಾರದ ಅಧಿಸೂಚನೆಯಲ್ಲಿ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರಿಸಿದ ನಂತರ, ಬಳ್ಳಾರಿ ಜಿಲ್ಲೆ ಹಾಗೂ ದಾವಣಗೆರೆ ಜಿಲ್ಲೆಯಲ್ಲಿರುವ ತಾಲ್ಲೂಕುಗಳ ವಿವರಗಳನ್ನು ನಮೂದಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (4)ರ ಸರ್ಕಾರದ ಸುತ್ತೋಲೆಯ ಉಪ ಕಂಡಿಕೆ (2)ರಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರ ಕಂಡಿಕೆ 6(1)(ಇ) ಪ್ರಕಾರ ಮತ್ತು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013 ರ ನಿಯಮ 5 ರ ಪ್ರಕಾರ ಸ್ಥಳೀಯ ವೃಂದ ಆಯ್ಕೆಗೆ ಹರಪನಹಳ್ಳಿಯ ಅರ್ಹ ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಅಭಿಮತ ಚಲಾಯಿಸಲು ಅವಕಾಶ ನೀಡಲಾಗಿರುತ್ತದೆ.

ಅದರಂತೆ, ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ವೃಂದಗಳಿಗೆ ಹರಪನಹಳ್ಳಿಯ ಅರ್ಹ ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಅಭಿಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

| ಕ್ರ.ಸಂ. | ವೃಂದ |
|---|---|
| 1. | ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ |
| 2. | ಅರಣ್ಯ ರಕ್ಷಕ |
| 3. | ಅರಣ್ಯ ವೀಕ್ಷಕ |
| 4. | ಆಡಳಿತ ಸಹಾಯಕರು |
| 5. | ವ್ಯವಸ್ಥಾಪಕರು |
| 6. | ಅಧೀಕ್ಷಕರು |
| 7. | ಪ್ರಥಮ ದರ್ಜೆ ಸಹಾಯಕರು |
| 8. | ದ್ವಿತೀಯ ದರ್ಜೆ ಸಹಾಯಕರು |
| 9. | ಶೀಘ್ರಲಿಪಿಗಾರರು |
| 10. | ಹಿರಿಯ ಬೆರಳಚ್ಚುಗಾರರು |
| 11. | ಬೆರಳಚ್ಚುಗಾರರು |
| 12. | ಆಕೃತಿ ರಚನೆಕಾರರು – ಗ್ರೇಡ್ - I ಮತ್ತು ಗ್ರೇಡ್ - II |
| 13. | ಹಿರಿಯ ವಾಹನ ಚಾಲಕರು |

I/339922/2022

| | |
|---|---|
| 14. | ವಾಹನ ಚಾಲಕರು |
| 15. | ಗ್ರೂಪ್ 'ಡಿ' ನೌಕರರು |

ಉಲ್ಲೇಖ (4)ರ ಸರ್ಕಾರದ ಸುತ್ತೋಲೆಯಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಹರಪನಹಳ್ಳಿ ತಾಲ್ಲೂಕಿನ ಸ್ಥಳೀಯ ವೃಂದ ಆಯ್ಕೆಗೆ ಅಭಿಮತ ಚಲಾಯಿಸಲು ಇಚ್ಚಿಸುವ ವ್ಯಕ್ತಿಗಳ ವೃಂದದ ನಿಯಂತ್ರಣ ಪ್ರಾಧಿಕಾರ/ಕಛೇರಿ ಮುಖ್ಯಸ್ಥರು, ಸೇವಾ ಪುಸ್ತಕದಲ್ಲಿರುವಂತೆ ಸ್ವಗ್ರಾಮ ಅಥವಾ ಸ್ಥಳವನ್ನು ಪರಿಶೀಲಿಸಿದ ನಂತರ, ಸ್ಥಳೀಯ ವ್ಯಕ್ತಿ ಎಂದು ಅನುಬಂಧ-ಎ ರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಸ್ವಗ್ರಾಮ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಸೇವಾ ಪುಸ್ತಕದಲ್ಲಿ ನಮೂದಿಸುವುದನ್ನು ಹೊರತುಪಡಿಸಿ, ಬೇರೆ ಸ್ಥಳಕ್ಕಾಗಿ ನೌಕರನು ಕ್ಲೇಮ್ ಮಾಡಿದ್ದಲ್ಲಿ, ಅವನು ಸ್ಥಳೀಯ ವ್ಯಕ್ತಿಯ ಪ್ರವರ್ಗಕ್ಕೆ ಸೇರುತ್ತಾನೆಂದು ಸಕ್ಷಮ ಪ್ರಾಧಿಕಾರದಿಂದ ಅನುಬಂಧ-ಬಿ ರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬೇಕಾಗಿರುತ್ತದೆ. *(ಸಕ್ಷಮ ಪ್ರಾಧಿಕಾರ ಎಂದರೆ, ಅರ್ಹತಾ ಪ್ರಮಾಣ ಪತ್ರವನ್ನು ನೀಡಲು ಸಕ್ಷಮರಾಗಿರತಕ್ಕಂತ ರೆವೆನ್ಯೂ ಉಪ-ವಿಭಾಗದ ಅಸಿಸ್ಟೆಂಟ್ ಕಮಿಷನರ್)*

ಸ್ಥಳೀಯ ವ್ಯಕ್ತಿಗಳ ಮಾನದಂಡಗಳನ್ನು ಪೂರೈಸುವ ಮತ್ತು ಆ ವೃಂದವನ್ನು ಸೇರಲು ಇಚ್ಚಿಸುವ ನೌಕರರು ಅನುಬಂಧ-ಸಿ ಯಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ 45 ದಿನಗಳ ಒಳಗಾಗಿ ತಮ್ಮ ಆಯ್ಕೆಯನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಮೂಲಕ ಈ ಕಛೇರಿಗೆ ಪೂರ್ಣ ಪ್ರಸ್ತಾವನೆಯೊಂದಿಗೆ ಸಲ್ಲಿಸಲು ತಿಳಿಸಿದೆ.

*[ಷರಾ: ಅನುಬಂಧ-ಎ ಮತ್ತು ಅನುಬಂಧ-ಸಿ ಗಳ ಮುಂಗಡ ಪ್ರತಿಗಳನ್ನು ಮಾತ್ರ ನೇರವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.]*

ಒಂದು ವೇಳೆ ಅರ್ಹ ನೌಕರರು ನಿಗಿದಿತ 45 ದಿನಗಳಲ್ಲಿ ತಮ್ಮ ಆಯ್ಕೆಯನ್ನು ಚಲಾಯಿಸದಿರುವ ಸಂದರ್ಭದಲ್ಲಿ, ಅವರು ಸ್ಥಳೀಯ ವೃಂದವನ್ನು ಸೇರಲು ಇಚ್ಛೆ ಹೊಂದಿಲ್ಲವೆಂದು ಭಾವಿಸಲಾಗುವುದು. ಸ್ಥಳೀಯ ವೃಂದಕ್ಕೆ ಸೇರಲು ಸ್ಥಳೀಯ ವ್ಯಕ್ತಿಯ ಇಚ್ಛೆಯನ್ನು ಹಿಂತೆಗೆದುಕೊಳ್ಳಲಾಗದ ಆಯ್ಕೆಯಾಗಿರುತ್ತದೆ. ಸ್ಥಳೀಯ ವೃಂದದ ಅಥವಾ ಉಳಿಕೆ ವೃಂದಕ್ಕೆ ಆಯ್ಕೆ ಮಾಡಿಕೊಳ್ಳುವುದಾಕ್ಕಾಗಲಿ ಆತನ ಉದ್ದೇಶವನ್ನು ತಿಳಿಸಿ, ಸ್ಥಳೀಯ ವ್ಯಕ್ತಿಗಳು ಒಂದು ಭಾರಿ ಮಾತ್ರ ಆಯ್ಕೆ ಮಾಡಬಹುದು. ಸ್ಥಳೀಯ ವೃಂದಕ್ಕೆ ಸೇರ್ಪಡೆಗೊಳ್ಳುವ ಸಂಬಂಧ ಸ್ವೀಕರಿಸಲಾಗುವ ಆಯ್ಕೆಗಳು ಅಧಿಸೂಚಿತ ಸ್ಥಳೀಯ ವೃಂದದ ಸಂಖ್ಯೆಗಿಂತ ಹೆಚ್ಚಾಗಿದ್ದಲ್ಲಿ, ಅವರ ಜೇಷ್ಠತೆ ಹಾಗೂ ಮೀಸಲಾತಿ ಆಧಾರದ ಮೇಲೆ ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಪರಿಗಣಿಸಲಾಗುವುದು.

ಈ ಸುತ್ತೋಲೆಯೊಂದಿಗೆ ಅನುಬಂಧ-ಎ, ಬಿ ಮತ್ತು ಸಿ ನಮೂನೆಗಳನ್ನು ಲಗತ್ತಿಸಿ, ಅರಣ್ಯ ಇಲಾಖೆಯ ವೆಬ್‌ಸೈಟ್ https://aranya.gov.in ನಲ್ಲಿ ಪ್ರಕಟಿಸಲಾಗಿದೆ.

**Signed by Raj Kishore Singh, Ifs**
**Date: 17-11-2022 10:15:54**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಪ್ರತಿಯನ್ನು ಮಾಹಿತಿ /ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಮುಖ್ಯ ಯೋಜನಾಧಿಕಾರಿ, ಕರ್ನಾಟಕ ರಾಜ್ಯ ಹೆದ್ದಾರಿ ನಿಗಮ ನಿಯಮಿತ, ಬೆಂಗಳೂರು.
6. ಆಯುಕ್ತರು, ಕೃಷ್ಣಾ ಮೇಲ್ದಂಡೆ ಯೋಜನೆ ಭೂ ಸ್ವಾಧೀನ, ನವನಗರ, ಬಾಗಲಕೋಟೆ.
7. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಬಿವೃದ್ಧಿ ನಿಗಮ ನಿಯಮಿತ, ವನವಿಕಾಸ ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಅರಣ್ಯ ಕೈಗಾರಿಕ ನಿಗಮ ನಿಯಮಿತ ವನವಿಕಾಸ ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಜಂಗಲ್ ಲಾಡ್ಜ್ ಸ್ ಮತ್ತು ರೆಸಾರ್ಟ್ಸ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ಪ್ರವಾಸೋದ್ಯಮ ಮಂಡಳಿ/ಕರ್ನಾಟಕ ಜೀವ ವೈವಿಧ್ಯ ಮಂಡಳಿ.

I/339922/2022

13. ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
14. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
15. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
16. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ), ಬೆಂಗಳೂರು ಇವರಿಗೆ ಕಳುಹಿಸುತ್ತಾ, ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
17. ಎಲ್ಲಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
18. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
19. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
20. ಅರಣ್ಯ ಇಲಾಖೆಯ ಎಲ್ಲಾ ಘಟಕಗಳ ಕ್ಷೇತ್ರ ಕಛೇರಿಯ ಮುಖ್ಯಸ್ಥರಿಗೆ (ಸಂಶೋಧನೆ/ ಕಾರ್ಯಯೋಜನೆ/ ಅರಣ್ಯ ಸಂಚಾರಿ ದಳ/ ತರಬೇತಿ).
21. ಹೆಚ್ಚುವರಿ ಪ್ರತಿ.

ಅನುಬಂಧ – ಎ

## ಸ್ವಗ್ರಾಮ ಪ್ರಮಾಣಪತ್ರ
[ಅನುಚ್ಛೇದ 371 (ಜೆ) ಮೇರೆಗೆ]
(5 (2)ನೇ ನಿಯಮ ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ ಶ್ರೀಮತಿ ------------------ ರವರು ---------------------- ರವರ ಮಗ/ ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ --------------- ಜಿಲ್ಲೆಯ ------------- ತಾಲ್ಲೂಕಿನ, ----------------- ಗ್ರಾಮ/ ಪಟ್ಟಣವನ್ನು ತನ್ನ ಸೇವಾ ಪುಸ್ತಕದಲ್ಲಿ ತನ್ನ ಸ್ವಗ್ರಾಮ/ ಸ್ಥಳ ಎಂದು ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ಮೇಲಿನ ನಮೂದು 01-01-2013ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿ ಇತ್ತೆಂದು ಸ್ವತಃ ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ: ------------------
ದಿನಾಂಕ: ---------------

ಹೆಸರು ---------------
ಪದನಾಮ ------------
ಕಛೇರಿ --------------
ಇಲಾಖೆ -------------

ಅನುಬಂಧ – ಬಿ

## ಅರ್ಹತಾ ಪ್ರಮಾಣಪತ್ರ
[ಅನುಚ್ಛೇದ 371 (ಜೆ) ಮೇರೆಗೆ]
(5 (3)ನೇ ನಿಯಮ ನೋಡಿ)

[ಪ್ರಮಾಣಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ ಶ್ರೀಮತಿ ------------------ ರವರು ------------------- ರವರ ಮಗ/ ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ---------------- ಜಿಲ್ಲೆಯ -------------- ತಾಲ್ಲೂಕಿನ ------------------ ಗ್ರಾಮ/ ಪಟ್ಟಣದ ಒಬ್ಬ ಸ್ಥಳೀಯ ವ್ಯಕ್ತಿಯಾಗಿರುತ್ತಾರೆ.

ಸ್ಥಳ: ----------------------
ದಿನಾಂಕ: --------------

ಹೆಸರು ---------------
ಅಸಿಸ್ಟೆಂಟ್ ಕಮೀಷನರ್
----------- ಉಪ ವಿಭಾಗ
----------- ಜಿಲ್ಲೆ

ಅನುಬಂಧ-ಸಿ

## ಸ್ಥಳೀಯ ವೃಂದದ ಸೇರಿಕೆಗಾಗಿ ಅರ್ಜಿ

(371 (ಜೆ) ಅನುಚ್ಛೇದದ ಮೇರೆಗೆ)
(6ನೇ ನಿಯಮ ನೋಡಿ)

[ಸ್ಥಳೀಯ ರಚನೆ, ವೃಂದಗಳು, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗದಲ್ಲಿ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

1. ಸ್ಥಳೀಯ ವೃಂದದ ಹೆಸರು : ........................................
2. ಇಲಾಖೆ : ........................................
3. ಜಿಲ್ಲೆ (ಸಂಬಂಧಿಸಿದ್ದರೆ) : ........................................
4. ಅರ್ಜಿದಾರನ ಹೆಸರು : ........................................
5. ಪ್ರಸ್ತುತ ಹುದ್ದೆಯಲ್ಲಿರುವ ಸ್ಥಳ : ........................................
6. ಹುದ್ದೆಯ ಹೆಸರು (ಪದನಾಮ) : ........................................

ನಾನು ಈ ಮೇಲೆ ಹೇಳಿದ ವೃಂದವನ್ನು ಸೇರಲು ಇಚ್ಛಿಸುವುದಾಗಿ ಮನವಿ ಮಾಡುತ್ತೇನೆ. ನಾನು ಸ್ಥಳೀಯ ವ್ಯಕ್ತಿಯಾಗಿದ್ದು ನನ್ನ ಕ್ಲೇಮಿನ ರುಜುವಾತಾಗಿ ನನ್ನ ಸ್ವಗ್ರಾಮ/ಅರ್ಹತಾ ಪ್ರಮಾಣ ಪತ್ರವನ್ನು ಈ ಮೂಲಕ ಲಗತ್ತಿಸಿದ್ದೇನೆ.

ಸ್ಥಳ: ........................................ ಹೆಸರು: ........................................

ದಿನಾಂಕ: ........................................ ವಿಳಾಸ: ........................................

........................................

........................................

ಮೊಬೈಲ್ ಸಂಖ್ಯೆ: ........................................